# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 707 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-09-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೆ.ಪಿ.ಟಿ.ಸಿ.ಎಲ್. ವ್ಯಾಪ್ತಿಗೆ ಬರುವ ಬೆಸ್ಕಾಂ, ಎಸ್ಕಾಂ, ಚೆಸ್ಕಾಂ ಹಾಗೂ ಇನ್ನಿತರೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೀಟರ್ ರೀಡರ್‌ಗಳು ಎಷ್ಟು ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ (ವಿಭಾಗವಾರು ಪಟ್ಟಿಯನ್ನು ಒದಗಿಸುವುದು) | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ 40 ಗುತ್ತಿಗೆ ಮಾಪಕ ಒದುಗರು ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ.<br><br>ಉಳಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಮೀಟರ್ ರೀಡರ್‌ಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲ. |
| ಆ) | ಇವರುಗಳಿಗೆ ನೀಡುತ್ತಿರುವ ವೇತನವೆಷ್ಟು ಇವರುಗಳನ್ನು ಈವರೆಗೂ ಖಾಯಂಗೊಳಿಸದಿರಲು ಕಾರಣಗಳೇನು; | ಗುತ್ತಿಗೆ ಮಾಪಕ ಒದುಗರಿಗೆ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸಲಾಗುತ್ತಿದೆ (ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ) ಹಾಗೂ ಇ.ಪಿ.ಎಫ್ ಮತ್ತು ಇ.ಎಸ್.ಐ ವಂತಿಗೆಗಳನ್ನು ಸಂಬಂಧಿತ ಇಲಾಖೆಗಳಿಗೆ ಪಾವತಿಸಲಾಗುತ್ತಿದೆ ಹಾಗೂ ಸದರಿ ಮಾಪಕ ಒದುಗರು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವರನ್ನು ಕಂಪನಿ ನಿಯಮಾನುಸಾರ ಖಾಯಂಗೊಳಿಸಲು ಅವಕಾಶವಿರುವುದಿಲ್ಲ. |
| ಇ) | ಇವರುಗಳನ್ನು ಖಾಯಂ ನೇಮಕಾತಿಗೊಳಿಸುವ ಸಂಬಂಧ ನ್ಯಾಯಾಲಯದಲ್ಲಿ ಆಗಿರುವ ತೀರ್ಮಾನಗಳೇನು;<br>ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಿ ಇವರನ್ನು ಖಾಯಂಗೊಳಿಸದಿರಲು ಕಾರಣವೇನು; | ಗುತ್ತಿಗೆ ಮಾಪಕ ಒದುಗರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ WP No: 10556/2005, WP No: 4854/2008 ಮತ್ತು WP No: 5174/2008 ರಲ್ಲಿ ದಾವೆ ಹೂಡಿ ತಮ್ಮನ್ನು ಖಾಯಂ ಹುದ್ದೆಗೆ ಪರಿಗಣಿಸುವಂತೆ ಕೋರಿರುತ್ತಾರೆ.<br><br>ಸದರಿ ರಿಟ್‌ಗಳ ಪೈಕಿ WP No: 4854/2008 ಮತ್ತು WP No: 5174/2008 ಪ್ರಕರಣಗಳನ್ನು ಉಮಾದೇವಿ ಮತ್ತು ಇತರರ ವಿರುದ್ಧ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶದನ್ವಯ ಕರ್ನಾಟಕ ಉಚ್ಚ ನ್ಯಾಯಾಲಯವು ತಿರಸ್ಕರಿಸಿರುತ್ತದೆ ಹಾಗೂ WP No:10556/2005 ರಲ್ಲಿಯೂ ಸಹ ಉಮಾದೇವಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಅನ್ವಯ ಕ್ರಮ ಕೈಗೊಳ್ಳಲು ದಿನಾಂಕ 05.10.2010ರಂದು ಆದೇಶಿಸಿರುತ್ತದೆ. ಅದರನ್ವಯ ಖಾಯಂಗೊಳಿಸಲು ಅವಕಾಶವಿಲ್ಲವೆಂದು ತಿಳಿಸಿ ದಿನಾಂಕ 04.11.2011 ರಲ್ಲಿ ಅರ್ಜಿದಾರರಿಗೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹಿಂಬರಹ ನೀಡಿರುತ್ತದೆ. |

...2

| | | |
|---|---|---|
| | | ಸದರಿ ರಿಟ್ ಪಿಟಿಷನ್ ಆದೇಶದ ವಿರುದ್ಧ ಗುತ್ತಿಗೆ ಮಾಪಕ ಓದುಗರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ WP No: 3949/2010 (S-RES) ಮತ್ತು ಇತರೆ ಸಂಯೋಜಿತ ರಿಟ್ ಅಪೀಲ್‌ಗಳಲ್ಲಿ (WA No: 4332-4349/2010 (S-RES), WA No: 4015/2010(S-RES) ಮೇಲ್ಮನವಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು 23.02.2013 ರಂದು ನೀಡಿರುವ ಆದೇಶದನ್ವಯ ಸದರಿ ಗುತ್ತಿಗೆ ಮಾಪಕ ಓದುಗರ ಸೇವೆಯನ್ನು ಮುಕ್ತಾಯಗೊಳಿಸದೆ ಈವರೆಗೂ ಮುಂದುವರೆಸಲಾಗಿರುತ್ತದೆ.<br><br>ಗುತ್ತಿಗೆ ಮಾಪಕ ಓದುಗರು ತಮ್ಮನ್ನು ಮಾಪಕ ಓದುಗ ಹುದ್ದೆಯಲ್ಲಿ ಖಾಯಂಗೊಳಿಸುವಂತೆ ದಿನಾಂಕ 19-10-2015 ರಂದು ಕ.ವಿ.ಪ್ರ.ನಿ.ನಿ.ಗೆ ಮನವಿಯನ್ನು ಸಲ್ಲಿಸಿರುತ್ತಾರೆ ಹಾಗೂ ಮತ್ತೊಮ್ಮೆ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ WP No: 42603/2016ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ನ್ಯಾಯಾಲಯವು ಗುತ್ತಿಗೆ ಮಾಪಕ ಓದುಗರು ದಿನಾಂಕ 19.10.2015 ರಂದು ಸಲ್ಲಿಸಿರುವ ಮನವಿಯ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸಿದ ಹಿನ್ನೆಲೆಯಲ್ಲಿ, ಗುತ್ತಿಗೆ ಮಾಪಕ ಓದುಗರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಕಂಪನಿಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ದಿನಾಂಕ 01.01.2018 ರಂದು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹಿಂಬರಹವನ್ನು ನೀಡಿರುತ್ತದೆ.<br><br>ಪ್ರಸ್ತುತ ಗುತ್ತಿಗೆ ಮಾಪಕ ಓದುಗರು ಇವರ ಸೇವೆಯನ್ನು ಖಾಯಂಗೊಳಿಸುವಂತೆ ಕೋರಿ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ WP No: 42603/2016ರ ದಾವೆಯು ಇತ್ಯರ್ಥಕ್ಕೆ ಬಾಕಿ ಇರುತ್ತದೆ. |
| ಈ) | ಕೂಡಲೇ ಇವರ ಸೇವೆಯನ್ನು ಖಾಯಂಗೊಳಿಸಲಾಗುವುದೇ? | ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಹಾಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 40 ಮಾಪಕ ಓದುಗರ ಸೇವೆಯನ್ನು ಕಿರಿಯ ಮಾಪಕ ಓದುಗ ಹುದ್ದೆಯಲ್ಲಿ ಖಾಯಂಗೊಳಿಸುವ ಬಗ್ಗೆ ಸೂಕ್ತ ನಿರ್ದೇಶನವನ್ನು ದಿನಾಂಕ 06.01.2021ರ ಪತ್ರದಲ್ಲಿ ಸರ್ಕಾರವನ್ನು ಕೋರಲಾಗಿರುತ್ತದೆ.<br><br>ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 8 ಸೇನಿಸೇ 2013, ದಿನಾಂಕ 04.09.2013ರಲ್ಲಿ "ನ್ಯಾಯಾಲಯಗಳು, ಸರ್ಕಾರ ಮತ್ತು ಇದರ ಅಧೀನ ಸಂಸ್ಥೆಗಳು ಮಾಡುವ ನೇಮಕಾತಿಗಳು (ಸಕ್ರಮಾತಿಯೂ ಸೇರಿದಂತೆ) ಸಂವಿಧಾನಾತ್ಮಕವಾಗಿ ಮಾಡುವ ನೇಮಕಾತಿ ನಿಯಮಗಳನುಸಾರವೇ ಇರಬೇಕೆಂದು ಮತ್ತು ಸಂವಿಧಾನದ ಉಪಬಂಧಗಳಿಗೆ ವಿರುದ್ಧವಾದ ಯಾವುದೇ ಕಾನೂನನ್ನು ಮಾಡಲು ಅವಕಾಶವಿಲ್ಲವೆಂದು ಕಾನೂನಿಗೆ ವಿರುದ್ಧವಾಗಿ ತಾತ್ಕಾಲಿಕ ನೇಮಕಾತಿಗಳನ್ನು ಸಕ್ರಮಗೊಳಿಸಲು ಯಾವುದೇ |

| | | |
|---|---|---|
| | | ಕ್ರಮ ಜರುಗಿಸುವುದು ಕಾನೂನಿನ ಅನುಸಾರ ಸರಿಯಲ್ಲ ಮತ್ತು ಅಂತಹ ಕ್ರಮಗಳನ್ನು ಯಾವುದೇ ಕಾರಣಕ್ಕೂ ಮುಂದುವರೆಸುವುದು ಉಚಿತವಲ್ಲ" ಎಂದು ಸೂಚಿರುವುದರಿಂದ ಗುತ್ತಿಗೆ ಮಾಪಕ ಓದುಗರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಸರ್ಕಾರವು ದಿನಾಂಕ 21.09.2021 ರಂದು ತಿಳಿಸಿರುತ್ತದೆ.<br><br>ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಮಾಪಕ ಓದುಗರನ್ನು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ನಿಯಮಾನುಸಾರ ಖಾಯಂಗೊಳಿಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಎನರ್ಜಿ 212 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ನಾಗರಾಜು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **707**ಕ್ಕೆ ಅನುಬಂಧ:-

## ಗುತ್ತಿಗೆ ತಾತ್ಕಾಲಿಕ ಮಾಪಕ ಓದುಗರ ವಿವರ

| ಕ್ರ. ಸಂ | ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಮಾಪಕ ಓದುಗರ ಹೆಸರು | ಕಾರ್ಯನಿರ್ವಹಿಸುತ್ತಿರುವ ಸ್ಥಳ | ಗುತ್ತಿಗೆ ಆಧಾರದಲ್ಲಿ ಸೇವೆಗೆ ಸೇರಿದ ದಿನಾಂಕ | ಹಾಲಿ ಪಾವತಿಸುತ್ತಿರುವ ಕನಿಷ್ಠ ವೇತನ |
|---|---|---|---|---|
| ಅತ್ತಾವರ ವಿಭಾಗ | | | | |
| 1 | ವಾಸುದೇವ ರಾವ್ | ಮಲ್ಲಿಕಟ್ಟೆ ಶಾಖೆ | 13.04.2000 | 15997 |
| 2 | ಎಸ್. ಪ್ರಕಾಶ್ | ಜೆಪ್ಪು ಶಾಖೆ | 18.03.2000 | 15997 |
| 3 | ವಿನಯ ಪ್ರಸಾದ್ | ನೆಹರೂ ಮೈದಾನ್ ಶಾಖೆ | 13.04.2000 | 15997 |
| 4 | ಉದಯ ಬಿ | ಕುಲಶೇಖರ ಶಾಖೆ-2 | 13.04.2000 | 15997 |
| 5 | ಬಸವರಾಜ್ ಎಂ.ಪಿ | ವಾಮಂಜೂರು ಶಾಖೆ | 13.04.2000 | 15997 |
| 6 | ಧನರಾಜ್ ಕೆ | ಪಡೀಲ್ ಶಾಖೆ | 25.11.2002 | 15997 |
| 7 | ಜಗದೀಶ್ | ಕುಲಶೇಖರ ಶಾಖೆ-1 | 13.04.2000 | 15997 |
| 8 | ಸಂತೋಷ್ ಕುಮಾರ್ | ಕುಲಶೇಖರ ಶಾಖೆ-1 | 13.04.2000 | 15997 |
| 9 | ನಾಗೇಶ್ ಎ. | ಮಣ್ಣಗುಡ್ಡ ಶಾಖೆ | 26.08.2000 | 15997 |
| 10 | ನವೀನ್ ಕುಮಾರ್ ಬಿ.ಎಸ್ | ಕುಲಶೇಖರ ಶಾಖೆ-2 | 01.07.2001 | 15997 |
| 11 | ಸುಧಾಕರ | ಕುಲಶೇಖರ ಶಾಖೆ-1 | 02.09.2000 | 15997 |
| ಬಂಟ್ವಾಳ ವಿಭಾಗ | | | | |
| 1 | ಉಮೇಶ್ ಗೌಡ ಪಿ | ಬೆಳ್ತಂಗಡಿ ಶಾಖೆ | 10.02.1999 | 15238/- |
| 2 | ಹರೀಶ್ ಎಸ್ | ಬೆಳ್ತಂಗಡಿ ಶಾಖೆ | 13.02.2001 | 15238/ |
| 3 | ವಿ ಹರ್ಷ | ಬೆಳ್ತಂಗಡಿ ಶಾಖೆ | 10.02.1999 | 15238/ |
| 4 | ಜಯಪ್ರಕಾಶ್ ಎಮ್ | ಮಡಂತ್ಯಾರು ಶಾಖೆ | 13.11.2000 | 15238/ |
| 5 | ರೋನಿ ಲಿಯೋ ಡಿಸೋಜ | ಮಡಂತ್ಯಾರು ಶಾಖೆ | 03.01.1999 | 15238/ |
| ಪುತ್ತೂರು ವಿಭಾಗ | | | | |
| 1 | ಕೃಷ್ಣಪ್ಪ ಎಂ | ಸುಳ್ಯ ಶಾಖೆ | 23.09.2000 | 15238 |
| 2 | ಗಣೇಶ್ ಕೆ | ಸುಳ್ಯ ಶಾಖೆ | 12.02.1999 | 15238 |
| 3 | ಪ್ರಕಾಶ ಎ | ಸುಳ್ಯ ಶಾಖೆ | 22.01.2000 | 15238 |
| 4 | ಆನಂದ ಗೌಡ ಕೆ. | ಪುತ್ತೂರು ಶಾಖೆ-1 | 04.03.2000 | 15238 |
| 5 | ಜಯಪ್ರಕಾಶ್ ಕೆ. | ಸುಳ್ಯ ಶಾಖೆ | 05.02.2001 | 15238 |
| 6 | ಸುರೇಶ ಗೌಡ ಎಸ್. | ಸುಳ್ಯ ಶಾಖೆ | 22.10.1999 | 15238 |

| | | | | |
|---|---|---|---|---|
| ಉಡುಪಿ ವಿಭಾಗ | | | | |
| 1 | ಎಂ. ಆರ್. ಅಂಬರೀಶ್ | ಮಣಿಪಾಲ ಶಾಖೆ | 02.09.2000 | 15590 |
| 2 | ಡಿ. ಎಂ ಸಿದ್ದೇಶ್ವರ | ಬ್ರಹ್ಮಾವರ ಶಾಖೆ | 01.03.2001 | 15238 |
| 3 | ಚಂದ್ರಹಾಸ | ಉಡುಪಿ ಶಾಖೆ | 06.11.2000 | 15590 |
| 4 | ನಾಗರಾಜ | ಬ್ರಹ್ಮಾವರ ಶಾಖೆ | 01.03.2001 | 15238 |
| 5 | ಬಸಪ್ಪ ಹಾಡಪದ | ಬ್ರಹ್ಮಾವರ ಶಾಖೆ | 29.08.2000 | 15238 |
| 6 | ಅಲ್ಬರ್ಟ್ ಪಿಂಟೋ | ಬ್ರಹ್ಮಾವರ ಶಾಖೆ | 01.03.2001 | 15238 |
| 7 | ಜಯಪ್ರಕಾಶ್ | ಕಲ್ಯಾಣಪುರ ಶಾಖೆ | 14.03.2001 | 15238 |
| 8 | ಮಹೇಶ್ ಮರಕಾಲ | ಕಲ್ಯಾಣಪುರ ಶಾಖೆ | 19.03.2001 | 15238 |
| ಕುಂದಾಪುರ ವಿಭಾಗ | | | | |
| 1 | ಜನಾರ್ಧನ ಪೂಜಾರಿ | ಗೋಪಾಡಿ ಶಾಖೆ | 05.08.2002 | 15238 |
| 2 | ಕೆ. ಸುರೇಶ್ ಶೆಟ್ಟಿ | ಗೋಪಾಡಿ ಶಾಖೆ | 02.09.2000 | 15238 |
| 3 | ವಿಕ್ರಮ್ ಹೆಗ್ಡೆ | ಗೋಪಾಡಿ ಶಾಖೆ | 05.08.2002 | 15238 |
| 4 | ನಂದ ಕುಮಾರ | ಗಂಗೊಳ್ಳಿ ಶಾಖೆ | 31.10.2000 | 15238 |
| 5 | ರಾಜೇಶ್ ಆಚಾರ್ | ಗಂಗೊಳ್ಳಿ ಶಾಖೆ | 20.03.2001 | 15238 |
| 6 | ಸಂತೋಷ್ ವಿ | ಗಂಗೊಳ್ಳಿ ಶಾಖೆ | 20.03.2001 | 15238 |
| 7 | ಉದಯ ಕುಮಾರ್ | ಗಂಗೊಳ್ಳಿ ಶಾಖೆ | 20.03.2001 | 15238 |
| ಕಾರ್ಕಳ ವಿಭಾಗ | | | | |
| 1 | ಭೋಜ ಪೂಜಾರಿ | ಕಾರ್ಕಳ ಎ ಶಾಖೆ | 01.03.2001 | 15238 |
| 2 | ದಿನೇಶ್ ಕುಮಾರ್ | ಕಾರ್ಕಳ ಎ ಶಾಖೆ | 14.03.2001 | 15238 |
| 3 | ಹರೀಶ್ | ಕಾರ್ಕಳ ಎ ಶಾಖೆ | 02.09.2000 | 15238 |